ಇ) ಐ.ಸಿ.ಯು.:- ವೆಂಟಿಲೇಟರ್ (5 ಸಂಖ್ಯೆಗಳು):- ಈ ಉಪಕರಣಗಳು ಹಳೆಯ ಮಾದರಿಯದ್ದಾಗಿದ್ದು ಇದರ ಬಳಕೆಯು ಸೀಮಿತವಾಗಿರುತ್ತದೆ.

ಈ) ಬ್ಲಡ್ ಸೆಲ್ ಸೆಪರೇಟರ್:- ಈ ಉಪಕರಣ ಬಳಸುವ ವಿಧಾನದಲ್ಲಿ ರಕ್ತದಾನಿಗಳು ದೀರ್ಘವಾದ ಸಮಯದಲ್ಲಿ ಆಸ್ಪತ್ರೆಯಲ್ಲಿ ಉಳಿಯಬೇಕಾಗಿರುವುದರಿಂದ ಉಪಕರಣ ಬಳಕೆಯಾಗುತ್ತಿಲ್ಲ. ಆದರೆ ಉಪಕರಣವನ್ನು ಉಪಯೋಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

3) ಲೇಡಿ ಘೋಷನ್ ಆಸ್ಪತ್ರೆ, ಮಂಗಳೂರು:-

ಈ ಆಸ್ಪತ್ರೆಯಲ್ಲಿ ಆಮದು ಮಾಡಿಕೊಂಡಿರುವ ಎಲ್ಲಾ ಉಪಕರಣಗಳು ಸುಸ್ಥಿತಿಯಲ್ಲಿದ್ದು ಆಸ್ಪತ್ರೆಯ ಉಪಯೋಗಕ್ಕೆ ಬಳಸಿಕೊಳ್ಳಲಾಗುತ್ತಿದೆ. ಆದರೆ ಬ್ಲಡ್ ಗ್ಯಾಸ್ ಅನಲೈಸರ್ ಉಪಕರಣವು ಎರಡು ತಿಂಗಳುಗಳಿಂದ ಕೆಟ್ಟು ಹೋಗಿದ್ದು ಇದರ ದುಸ್ಥಿತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಗ್ರಾಮೀಣ ನೀರು ಸರಬರಾಜು ಯೋಜನೆಗಳು

2017(2538) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮೀಣ ನೀರು ಸರಬರಾಜು ಇಲಾಖೆ ಅಡಿಯಲ್ಲಿ ಬರುವ ಎಷ್ಟು ಯೋಜನೆಗಳಿಗೆ ಹೊರ ದೇಶಗಳಿಂದ ಸಂಪನ್ಮೂಲ ಪಡೆಯಲಾಗುತ್ತಿದೆ?

ಆ) ಅವು ಯಾವುವು; ಎಲ್ಲಿ ಅನುಷ್ಠಾನಗೊಳ್ಳುತ್ತಿವೆ; ಯೋಜನಾ ವೆಚ್ಚ ಎಷ್ಟು; ಸಹಾಯ ಧನದ ಪ್ರಮಾಣ ಎಷ್ಟು;

ಇ) ಈ ಯೋಜನೆಗಳ ಅನುಷ್ಠಾನಕ್ಕೆ ಯಾವ ಏಜೆನ್ಸಿಗಳನ್ನು ಗುರ್ತಿಸಲಾಗಿದೆ; ಅವರಿಗೆ ಪಾವತಿ ಮಾಡಿರುವ ಸಮಾಲೋಚನ ಶುಲ್ಕ ಎಷ್ಟು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು):

ಅ) ಗ್ರಾಮೀಣ ನೀರು ಸರಬರಾಜು ಇಲಾಖೆಯಡಿ ಎರಡು ಯೋಜನೆಗಳಿಗೆ ಹೊರ ದೇಶಗಳಿಂದ ಸಂಪನ್ಮೂಲವನ್ನು ಪಡೆಯಲಾಗುತ್ತಿದೆ.

ಆ) ಎರಡು ಯೋಜನೆಗಳ ಹೆಸರುಗಳನ್ನು ಈ ಕೆಳಗೆ ತೋರಿಸಲಾಗಿದೆ.

1. ವಿಶ್ವಬ್ಯಾಂಕ್ ನೆರವಿನ ಎರಡನೇ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ- "ಜಲ ನಿರ್ಮಲ ಯೋಜನೆ"

2. ಡ್ಯಾನಿಡಾ ನೆರವಿನ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ - ಹಂತ -2 (ಜಲನಿಧಿ ಯೋಜನೆ-2).

1. ವಿಶ್ವಬ್ಯಾಂಕ್ ನೆರವಿನ ಜಲ-ನಿರ್ಮಲ ಯೋಜನೆಯನ್ನು ಉತ್ತರ ಕರ್ನಾಟಕದ 11 ಜಿಲ್ಲೆಗಳಲ್ಲಿ ಅಂದರೆ ಉತ್ತರ ಕನ್ನಡ, ಬೆಳಗಾಂ, ಬಿಜಾಪುರ, ಬಾಗಲಕೋಟೆ, ಬೀದರ್, ಧಾರವಾಡ, ಗದಗ, ಹಾವೇರಿ, ರಾಯಚೂರು, ಕೊಪ್ಪಳ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯನ್ನು ಈ ಜಿಲ್ಲೆಗಳ ಸುಮಾರು 700 ಗ್ರಾಮ ಪಂಚಾಯತಿಗಳಲ್ಲಿ (2100 ಗ್ರಾಮಗಳು) ಅನುಷ್ಠಾನಗೊಳಿಸಲು ಯೋಜಿಸಿದೆ. ಯೋಜನಾ ವೆಚ್ಚ ಸುಮಾರು ರೂ. 1035.37 ಕೋಟಿಗಳಾಗಿದ್ದು, ವಿಶ್ವಬ್ಯಾಂಕಿನ ನೆರವು ಸುಮಾರು ರೂ. 810.77 ಕೋಟಿಗಳು.

2. ಡ್ಯಾನಿಡಾ ನೆರವಿನ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ-2 (ಜಲನಿಧಿ-2)ನ್ನು ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೆ ಕೋಲಾರ, ಚಿತ್ರದುರ್ಗ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ 105 ಗ್ರಾಮ ಪಂಚಾಯತಿಗಳಲ್ಲಿ ಹಂತ-1 ರಡಿಯ ಯೋಜನಾ ಚಟುವಟಿಕೆಗಳ ಸಾಂಸ್ಥೀಕರಣವನ್ನು ನಡೆಸಲಾಗುವುದು. ಯೋಜನೆಯ ಒಟ್ಟು ವೆಚ್ಚ ಸುಮಾರು ರೂ. 35.20 ಕೋಟಿಗಳಾಗಿದ್ದು, ಡ್ಯಾನಿಡಾ ನೆರವು ಸುಮಾರು ರೂ. 20.60 ಕೋಟಿಗಳು.

ಇ) 1. ಈ ಯೋಜನೆಯ ಅನುಷ್ಠಾನಕ್ಕೆ ಗುರುತಿಸಲಾದ ಏಜೆನ್ಸಿಗಳು ಮತ್ತು ಅವರುಗಳಿಗೆ ಪಾವತಿ ಮಾಡಿರುವ ಸಮಾಲೋಚನಾ ಶುಲ್ಕದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

2. ಡ್ಯಾನಿಡಾ ನೆರವಿನ ಜಲನಿಧಿ ಯೋಜನೆ-2 ಇದರಡಿ ಯಾವುದೇ ಏಜೆನ್ಸಿಗಳನ್ನು ಗುರುತಿಸಿರುವುದಿಲ್ಲ.

ಅನುಬಂಧ-1

ಜಲ ನಿರ್ಮಲ ಯೋಜನೆಯಡಿಯಲ್ಲಿ ಪ್ರಾಯೋಗಿಕ ಮತ್ತು ತಂಡ-1 ರ ಜಿಲ್ಲೆಗಳಿಗೆ ಸಮಾಲೋಚನಾ ಸಂಸ್ಥೆ / ಸರ್ಕಾರೇತರ ಸಂಸ್ಥೆಗಳನ್ನು ನೇಮಿಸಿರುವ ಹಾಗೂ ಸಮಾಲೋಚನಾ ಶುಲ್ಕ ನೀಡಿರುವ ವಿವರ

ಪ್ರಾಯೋಗಿಕ ತಂಡ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನೆರವು ಸಂಸ್ಥೆ / ಸಮಾಲೋಚನಾ ಸಂಸ್ಥೆ / ಸರ್ಕಾರೇತರ ಸಂಸ್ಥೆಯ ಹೆಸರು	ಫೆಬ್ರವರಿ 2003 ರವರೆಗೆ ನೀಡಿರುವ ಸಮಾಲೋಚನಾ ಶುಲ್ಕ
1	2	3	4
1.	ಬೆಳಗಾಂ	ಮೆ: ಸ್ಪ್ಯಾನ್ ಕನ್‌ಸಲ್ಟಂಟ್, ಬೆಂಗಳೂರು	12.04
		ಮೆ: ಕನ್‌ಸಲ್ಟಂಟಿಗ್ ಇಂಜಿನಿಯರಿಂಗ್ ಸರ್ವೀಸಸ್ (ಇಂಡಿಯಾ) ಲಿ.	3.34
		ಮೆ: ಅಮೀನಭಾವಿ & ಹೆಗ್ಗಡೆ, ಕನ್‌ಸಲ್ಟಂಟಿಗ್ ಇಂಜಿನಿಯರ್ಸ್ ಪ್ರೈ. ಲಿ., ಧಾರವಾಡ	6.26
		ಮೆ: ಆರ್‌ಡಿಎಸ್ ಮುರ್ಗೋಡ್ (ಸರ್ಕಾರೇತರ ಸಂಸ್ಥೆ)	8.50
		ಮೆ: ಚೇತನ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್, ಮನ್ನವಲ್ಲಿ (ಸರ್ಕಾರೇತರ ಸಂಸ್ಥೆ)	5.63
2.	ಧಾರವಾಡ	ಮೆ: ಅಮೀನಭಾವಿ & ಹೆಗ್ಗಡೆ, ಕನ್‌ಸಲ್ಟಂಟಿಗ್ ಇಂಜಿನಿಯರ್ಸ್ ಪ್ರೈ. ಲಿ., ಧಾರವಾಡ	2.24
		ಮೆ: ಇಂಡಿಯನ್ ಡೆವಲಪ್‌ಮೆಂಟ್ ಸರ್ವೀಸಸ್ (ಐಡಿಎಸ್), (ಸರ್ಕಾರೇತರ ಸಂಸ್ಥೆ)	1.94

1	2	3	4
3.	ಗುಲ್ಬರ್ಗಾ	ಮೆ: ಕನ್‌ಸಲ್ಟಂಟಿಗ್ ಇಂಜಿನಿಯರಿಂಗ್ ಸರ್ವೀಸಸ್ (ಇಂಡಿಯಾ) ಲಿ.	7.53
		ಮೆ: ಗ್ರಾಮ ಪ್ರಗತಿ ಸೇವಾ ಸಮಿತಿ (ಸರ್ಕಾರೇತರ ಸಂಸ್ಥೆ)	1.16
		ಮೆ: ಬಯಲುಸೀಮಾ ರೂರಲ್ ಡೆವೆಲಪ್‌ಮೆಂಟ್ ಸೊಸೈಟಿ (ಸರ್ಕಾರೇತರ ಸಂಸ್ಥೆ)	1.16

ತಂಡ-1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನೆರವು ಸಂಸ್ಥೆ / ಸಮಾಲೋಚನಾ ಸಂಸ್ಥೆ / ಸರ್ಕಾರೇತರ ಸಂಸ್ಥೆಯ ಹೆಸರು	ಫೆಬ್ರವರಿ 2003 ರವರೆಗೆ ನೀಡಿರುವ ಸಮಾಲೋಚನಾ ಶುಲ್ಕ
1	2	3	4
1.	ಉತ್ತರ ಕನ್ನಡ	ಮೆ: ವಾಟರ್ & ಪವರ್ ಕನ್ಸಲ್ಟನ್ಸಿ ಸರ್ವೀಸಸ್ (ಇಂಡಿಯಾ) ಲಿ, ನವದೆಹಲಿ	ಇಲ್ಲಾ
		ಮೆ: ಐಜಿಐ & ಎಸ್ (ಪ್ರೈ) ಲಿ, ಹೈದರಾಬಾದ್	ಇಲ್ಲಾ
		ಮೆ: ಟ್ರೈಬಲ್ ಎಜುಕೇಷನ್ ಮತ್ತು ಎಕಾನಮಿಕ್ ಡೆವೆಲಪ್‌ಮೆಂಟ್ ಟ್ರಸ್ಟ್, (ಟಿಇಇಡಿಎಸ್), ಯಲ್ಲಾಪುರ, (ಸರ್ಕಾರೇತರ ಸಂಸ್ಥೆ)	ಇಲ್ಲಾ
		ಮೆ: ಕಾರವಾರ ರೂರಲ್ ವಿಮೆನ್ & ಚಿಲ್ಡ್ರನ್ ಡೆವಲಪ್‌ಮೆಂಟ್ ಸೊಸೈಟಿ, ಕಾರವಾರ (ಸರ್ಕಾರೇತರ ಸಂಸ್ಥೆ)	ಇಲ್ಲಾ
		ಮೆ: ವಿಕಾಸ ರೂರಲ್ ಡೆವೆಲಪ್‌ಮೆಂಟ್ ಸೊಸೈಟಿ, ಮಾಳಗಿ (ಸರ್ಕಾರೇತರ ಸಂಸ್ಥೆ)	ಇಲ್ಲಾ
2.	ಬಾಗಲಕೋಟೆ	ಮೆ: ಏಬಲ್ ಇಂಜಿನಿಯರಿಂಗ್ ಕನ್ಸಲ್ಟಂಟ್ಸ್, ಬೆಂಗಳೂರು	ಇಲ್ಲಾ
		ಮೆ: ಸ್ಟೆಂ, ಬೆಂಗಳೂರು	ಇಲ್ಲಾ
3.	ಬೆಳಗಾಂ	ಮೆ: ಸ್ಟೂಪ್ ಕನ್ಸಲ್ಟಂಟ್ಸ್, ಬೆಂಗಳೂರು	ಇಲ್ಲಾ
		ಮೆ: ಸ್ಪ್ಯಾನ್ ಕನ್ಸಲ್ಟಂಟ್ಸ್, ಬೆಂಗಳೂರು	ಇಲ್ಲಾ
		ಮೆ: ಅಮೀನಭಾವಿ & ಹೆಗ್ಗಡೆ, ಕನ್‌ಸಲ್ಟಂಟಿಗ್ ಇಂಜಿನಿಯರ್ಸ್ ಪ್ರೈ. ಲಿ., ಧಾರವಾಡ	ಇಲ್ಲಾ
4.	ಬಿಜಾಪುರ	ಮೆ: ಬಿ.ವಿ.ವಿ.ಎಸ್. ಕನ್ಸಲ್ಟಂಟ್ಸ್, ಬೆಂಗಳೂರು	ಇಲ್ಲಾ
		ಮೆ: ನಿಕೇತನ್ ಕನ್ಸಲ್ಟಂಟ್ಸ್, ಬೆಂಗಳೂರು	ಇಲ್ಲಾ
5.	ಧಾರವಾಡ	ಮೆ: ಅಮೀನಭಾವಿ & ಹೆಗ್ಗಡೆ, ಕನ್‌ಸಲ್ಟಂಟಿಗ್ ಇಂಜಿನಿಯರ್ಸ್, ಪ್ರೈ.ಲಿ., ಧಾರವಾಡ	ಇಲ್ಲಾ
		ಮೆ: ಸ್ಟೂಪ್ ಕನ್ಸ್‌ಲ್ಟಂಟ್ಸ್, ಬೆಂಗಳೂರು	ಇಲ್ಲಾ
6.	ಗದಗ	ಮೆ: ಸ್ಪ್ಯಾನ್ ಕನ್ಸಲ್ಟಂಟ್ಸ್, ಬೆಂಗಳೂರು	ಇಲ್ಲಾ
		ಮೆ: ದಲಾಲ್ ಮೋಟ್ ಮ್ಯಾಕ್‌ಡೊನಾಲ್ಡ್, ಚೆನ್ನೈ	ಇಲ್ಲಾ

1	2	3	4
7.	ಹಾವೇರಿ	ಮೆ: ಎಂಡಿಪಿ ಕನ್ಸಲ್ಟಂಟ್ಸ್ (ಪ್ರೈ) ಲಿ. ನವದೆಹಲಿ	ಇಲ್ಲಾ
		ಮೆ: ಡಿಹೆಚ್‌ವಿ ಕನ್ಸಲ್ಟಂಟ್ಸ್ (ಪ್ರೈ) ಲಿ. ನವದೆಹಲಿ	ಇಲ್ಲಾ
8.	ಕೊಪ್ಪಳ	ಮೆ: ಐಜಿಐ & ಎಸ್ (ಪ್ರೈ) ಲಿ. ಹೈದರಾಬಾದ್	ಇಲ್ಲಾ
		ಮೆ: ಜೆ.ಎಸ್.ಎಸ್. ಕನ್ಸಲ್ಟಂಟ್ಸ್, ಮೈಸೂರು	ಇಲ್ಲಾ
9.	ರಾಯಚೂರು	ಮೆ: ಸ್ಟೆಂ, ಬೆಂಗಳೂರು	ಇಲ್ಲಾ
		ಮೆ: ಡಿಹೆಚ್‌ವಿ ಕನ್ಸಲ್ಟಂಟ್ಸ್ (ಪ್ರೈ) ಲಿ. ನವದೆಹಲಿ	ಇಲ್ಲಾ
10.	ಬೀದರ್	ಮೆ: ಕನ್ಸಲ್ಟಂಟಿಗ್ ಇಂಜಿನಿಯರಿಂಗ್ ಸರ್ವೀಸಸ್ (ಇಂಡಿಯ) ಲಿ.	ಇಲ್ಲಾ
		ಮೆ: ನಿಕೇತನ್ ಕನ್ಸಲ್ಟಂಟ್ಸ್, ಬೆಂಗಳೂರು	ಇಲ್ಲಾ
11.	ಗುಲ್ಬರ್ಗಾ	ಮೆ: ಕನ್ಸಲ್ಟಂಟಿಗ್ ಇಂಜಿನಿಯರಿಂಗ್ ಸರ್ವೀಸಸ್ (ಇಂಡಿಯಾ) ಲಿ.	-
		ಮೆ: ಷಾ ಟೆಕ್ನಿಕಲ್ ಕನ್ಸಲ್ಟಂಟ್ಸ್ (ಪ್ರೈ) ಲಿ. ಮುಂಬಯಿ	-

ನೈರ್ಮಲ್ಯ ಮತ್ತು ಶುಚಿತ್ವ ಉತ್ತೇಜನ ಸಮಾಲೋಚನೆ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಸಮಾಲೋಚನಾ ಸಂಸ್ಥೆಯ ಹೆಸರು	ಫೆಬ್ರವರಿ 2003 ರವರೆಗೆ ನೀಡಿರುವ ಸಮಾಲೋಚನಾ ಶುಲ್ಕ ನೀಡಿರುವುದು
1	3	4
1.	ಮೆ: ಸ್ಟೆಂ, ಬೆಂಗಳೂರು	12.34

ತರಬೇತಿ ವ್ಯವಸ್ಥಾಪನಾ ಸಮಾಲೋಚನೆ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಸಮಾಲೋಚನಾ ಸಂಸ್ಥೆಯ ಹೆಸರು	ಫೆಬ್ರವರಿ 2003 ರವರೆಗೆ ನೀಡಿರುವ ಸಮಾಲೋಚನಾ ಶುಲ್ಕ ನೀಡಿರುವುದು
1	3	4
1.	ಮೆ: ಜೆ.ಎಸ್.ಎಸ್. ಕನ್ಸಲ್ಟಂಟ್ಸ್, ಮೈಸೂರು	8.24